ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಪೊಲೀಸ್ ಇಲಾಖೆಯ ಕರ್ತವ್ಯ ನಿರ್ಲಕ್ಷ್ಯ ಕುರಿತು

ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

455 (630) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರವಾರ ಜಿಲ್ಲೆಯ ಹಳಿಯಾಳ/ಜೋಯಿಡಾ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಮಾದಕ ದ್ರವ್ಯಗಳ ಜಾಲ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ; ಸದರಿ ವಿಷಯದಲ್ಲಿ ಕಳೆದ 2 ವರ್ಷಗಳಿಂದ ದಾಖಲಾದ ಪ್ರಕರಣಗಳೆಷ್ಟು; ಎಷ್ಟು ಪ್ರಕರಣಗಳು ನ್ಯಾಯಾಲಯದ ಶಿಕ್ಷೆಗೊಳಪಟ್ಟಿದೆ;

(ಆ) ಹಳಿಯಾಳ/ಜೋಯಿಡಾ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಿಂದ ಮಟಕಾ ಹಾಗೂ ಇಸ್ಪೀಟ್ ದಂದೆಗಳು ಬೇಕಾ ಬಿಟ್ಟಿ ನಡೆಯುತ್ತಿರುವುದು ನಿಜವೇ; ಈ ಕುರಿತು ಪೊಲೀಸ್ ಇಲಾಖೆ ಯಾವುದೇ ರೀತಿಯಲ್ಲಿ ಸ್ಪಂದಿಸದೇ ಇರುವುದು ಏಕೆ; ಸದರಿ ವಿಷಯದಲ್ಲಿ ಇಲ್ಲಿಯವರೆಗೆ ಎಫ್.ಐ.ಆರ್. ದಾಖಲಿಸಿದ ವಿವರ ಹಾಗೂ ಸದರಿ ವಿಷಯದಲ್ಲಿ ಎಷ್ಟು ಆರೋಪಿತರ ಮೇಲೆ ಕ್ರಮಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಇ) ಹಳಿಯಾಳ/ಜೋಯಿಡಾ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಿಂದ ಆಗಿರುವ ಅಪಘಾತಗಳ ವಿವರ ನೀಡುವುದು ಸದರಿ ವಿಷಯದಲ್ಲಿ ಎಷ್ಟು ಪ್ರಕರಣಗಳು ಮುಕ್ತಾಯ ಆಗಿರುತ್ತೆ; ಎಷ್ಟು ಪ್ರಕರಣಗಳು ಚಾಲ್ತಿಯಲ್ಲಿರುತ್ತದೆ? (ತಿಂಗಳವಾರು/ವರ್ಷವಾರು ಸವಿಸ್ತಾರ ವರದಿಯ ವಿವರ ನೀಡುವುದು)